ಸರ್ಕಾರದ ಜೊತೆ ಚರ್ಚೆ ಮಾಡಿ ಒಂದು ಯೋಜನೆ ತಯಾರಿಸಿ ನಾವು ಅದಕ್ಕೆ ಕಾರ್ಯಕ್ರಮ ರೂಪಿಸುತ್ತೇವೆ.

ಶ್ರೀ ಬಿ.ಎಂ. ಇದಿನಬ್ಬ:– ಈ ಹೂಳೆತ್ತುವ ವಿಚಾರವನ್ನು ನಾವು ಕಳೆದ ಏಳು ವರ್ಷಗಳಿಂದ ಕೇಳುತ್ತಲೇ ಬಂದಿದ್ದೇವೆ. ಈ ಬಗ್ಗೆ ಅಲ್ಲಿನ ಮೀನುಗಾರರು ಹತ್ತು ದಿವಸಗಳಿಂದ ಧರಣಿ ಮಾಡಿದ್ದಾರೆ, ಮುಷ್ಕರ ಮಾಡಿದ್ದಾರೆ. ಪ್ರತಿವರ್ಷ ಡ್ರೆಡ್ಜನ್ನು ಈ ವರ್ಷ ತರಿಸುತ್ತೇವೆ, ಈ ವರ್ಷ ತರಿಸುತ್ತೇವೆ ಎಂದು ಏಳು ವರ್ಷಗಳಿಂದ ಹೇಳುತ್ತಲೇ ಇದ್ದಾರೆ. ಆದರೆ ಇಷ್ಟರವರೆಗೆ ತರಿಸಿಲ್ಲ. ಈಗಲೂ ತರಿಸುತ್ತೇವೆ ಎಂದು ಹೇಳುತ್ತಾರೆ. ಎಷ್ಟು ಸಮಯದಲ್ಲಿ ಅಂತ ಮಾಡುತ್ತೀರಿ ? ಮತ್ತು ಹೂಳು ಎತ್ತದಿರುವುದರಿಂದ ಈ ಏಳು ವರ್ಷಗಳಲ್ಲಿ ಎಷ್ಟು ಜನ ಸತ್ತಿದ್ದಾರೆ ? ಎಷ್ಟು ನೌಕೆಗಳು ಮುಳುಗಿವೆ ? ಎಷ್ಟು ಜನರಿಗೆ ಹಾನಿಯಾಗಿದೆ ಎಂದು ತಿಳಿಸುತ್ತೀರಾ ?

ಶ್ರೀ ವಸಂತ ವಿ. ಸಾಲಿಯಾನ:– ಮಾನ್ಯ ಸದಸ್ಯರು ಹೇಳಿದ ವಿಚಾರ ನಮ್ಮ ಗಮನಕ್ಕೆ ಬಂದಿದೆ. ಈಗ ಏನಾಗಿದೆ ಎಂದರೆ ಅಡೆತಡೆ ಗೋಡೆ ಬಗ್ಗೆ ಕಂಟ್ರಾಕ್ಟರ್ಸ್ ಪ್ರಾಬ್ಲಮ್ ಇರುವುದರಿಂದ, ಈಗ ಪುನಃ ಸರ್ಕಾರದ ವತಿಯಿಂದ ಮಂಜೂರಾತಿ ಆಗಬೇಕಾಗುತ್ತದೆ. ಅದು ಈಗ ಸರ್ಕಾರದಲ್ಲಿದೆ. ಅಡೆತಡೆ ಗೋಡೆಯ ಕೆಲಸ ಸಂಪೂರ್ಣವಾಗಿ ಆದ ಮೇಲೆ ಡ್ರೆಡ್ಜಿಂಗ್ ತರಿಸಿ ಮಾಡುವುದಕ್ಕೆ ಹೈಪವರ್ ಕಮಿಟಿಯವರು ನಿರ್ಧಾರಕ್ಕೆ ಬಂದಿದ್ದಾರೆ. ಈಗಾಗಲೇ ಅವರು ಡ್ರೆಡ್ಜಿಂಗ್ ಮಾಡುವ ಬಗ್ಗೆ ಒಂದು ನಿರ್ಧಾರಕ್ಕೆ ಬಂದಿದ್ದಾರೆ. ಅಡೆತಡೆ ಗೋಡೆಯನ್ನು ಸಂಪೂರ್ಣವಾಗಿ ಈ ಸಲ ಮುಗಿಸುವುದಕ್ಕೆ ನಾವು ಬಹಳಷ್ಟು ಪ್ರಯತ್ನ ಮಾಡುತ್ತಿದ್ದೇವೆ. ಅದನ್ನು ಮುಗಿಸಿದ ನಂತರವೇ ಡ್ರೆಡ್ಜಿಂಗ್ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ.

ಬಳಫಟ್ಟ ಗ್ರಾಮಕ್ಕೆ ಪಶುವೈದ್ಯ ಶಾಲೆಯ ಮಂಜೂರಾತಿ

1728: ಡಾ॥ ಎನ್.ಬಿ. ನಂಜಪ್ಪ (ಶ್ರವಣಬೆಳಗೊಳ):–

ಪಶು ಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶ್ರವಣಬೆಳಗೊಳ ತಾಲ್ಲೂಕು ಬಾಗೂರು ಹೋಬಳಿ ಬಳಫಟ್ಟ ಗ್ರಾಮದಲ್ಲಿರುವ ಪಶುವೈದ್ಯ ಶಾಲೆಗೆ ಸ್ವಂತ ಕಟ್ಟಡವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಅಲ್ಲಿಯ ಗ್ರಾಮಸ್ಥರು ಕಟ್ಟಡ ನೀಡಿ ಮಂಜೂರಾತಿಗಾಗಿ ಮನವಿಯನ್ನು ಆಗಿಂದಾಗ್ಗೆ ಸಲ್ಲಿಸುತ್ತಿದ್ದರೂ ಮಂಜೂರಾತಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಸದರಿ ಪಶುವೈದ್ಯ ಶಾಲೆಗಾಗಿ ಮಂಜೂರಾತಿ ನೀಡಿ ಖಾಯಂ ವೈದ್ಯರನ್ನು ನೇಮಕ ಮಾಡಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಕೆ.ಎನ್. ನಾಗೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು):–

ಅ) ಇಲ್ಲ.

ಆ) ಹೌದು.

ಇ) 1992-93ನೇ ಸಾಲಿನಲ್ಲಿ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ತೆರೆಯಲು ಸ್ಥಳಗಳನ್ನು ಆಯ್ಕೆ ಮಾಡಲಾಗುತ್ತಿದೆ. ಆ ಸಮಯದಲ್ಲಿ ನಿಯಮಗಳನ್ನು ಅನುಸರಿಸಿ ಸದರಿ ಸ್ಥಳಕ್ಕೆ ಮಂಜೂರಾತಿ ನೀಡುವ ವಿಷಯವನ್ನು ಪರಿಶೀಲಿಸಲಾಗುವುದು.

ಡಾ॥ ಎನ್.ಬಿ. ನಂಜಪ್ಪ:– ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದ ಬಳಘಟ್ಟ ಗ್ರಾಮದಲ್ಲಿ ಒಂದು ಆಸ್ಪತ್ರೆ ಇದ್ದು ಅದು ಏಳು ವರ್ಷಗಳಿಂದ ನಡೆಯುತ್ತಿದೆ. ಅದಕ್ಕೆ ಗವರ್ನಮೆಂಟ್ ಆರ್ಡರ್ ಕೂಡ ಆಗಿದೆ. ಆ ಹಳ್ಳಿಯಲ್ಲಿ ಅದಕ್ಕೆ ಕಟ್ಟಡ ಕೂಡ ಕಟ್ಟಿಕೊಟ್ಟಿದ್ದಾರೆ. ಆದರೆ ಈಗ ಇರತಕ್ಕಂಥ ಉಪಕರಣಗಳನ್ನು ಬೇರೆ ಕಡೆಗೆ ತೆಗೆದುಕೊಂಡು ಹೋಗಿ ನಿಮ್ಮ ಆಸ್ಪತ್ರೆಯನ್ನು ಮುಚ್ಚಿ ಹಾಕಿಬಿಡುತ್ತೇವೆ ಎಂದು ಹೇಳುತ್ತಿದ್ದಾರೆ. ಅದಕ್ಕೆ ಉತ್ತರ ಕೊಡಬೇಕೆಂದು ಮಾನ್ಯ ಪಶುಸಂಗೋಪನಾ ಇಲಾಖೆಯ ರಾಜ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ:– 1992-93ಕ್ಕೆ ನಾವು 194 ಪಶು ಪ್ರಾಥಮಿಕ ಕೇಂದ್ರಗಳನ್ನು ಹಾಗೂ 100ನ್ನು ಮೇಲ್ದರ್ಜೆಗೆ ಏರಿಸುವುದಕ್ಕೆ ಇವತ್ತು ಆಜ್ಞೆ ಹೊರಡಿಸಲಾಗಿದೆ. ಅದರಲ್ಲಿ ಈ ಬಳಘಟ್ಟ ಗ್ರಾಮವೂ ಸೇರಿದೆ. ನಾಳೆಯಿಂದ ಇದು ಪ್ರಾರಂಭವಾಗುತ್ತದೆ ಎಂದು ತಮಗೆ ತಿಳಿಸುವುದಕ್ಕೆ ಇಚ್ಛಿಸಡುತ್ತೇನೆ.

ಡಾ॥ ಎನ್.ಬಿ. ನಂಜಪ್ಪ:– ನಾನು ಹೊಸದರ ಬಗ್ಗೆ ಕೂಡ ಕೇಳಿದ್ದೇನೆ. ಇದರ ಬಗ್ಗೆ ಕೂಡ ನಾನು ಪತ್ರ ಬರೆದಿದ್ದೇನೆ.

ಶ್ರೀ ಕೆ.ಎನ್. ನಾಗೇಗೌಡ:– ಅದನ್ನು ನೋಡುತ್ತೇನೆ.

ವನ್ಯ ಮೃಗ ಸಂರಕ್ಷಣಾ ವಿಭಾಗಗಳನ್ನು ಸ್ಥಾಪಿಸುವುದರ ಉದ್ದೇಶ ಕುರಿತು

1933: ಶ್ರೀ ಜಿ.ಎಸ್. ಆಚಾರ್ (ಬೈಂದೂರ್):–

ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವನ್ಯ ಮೃಗ ಸಂರಕ್ಷಣಾ ವಿಭಾಗಗಳನ್ನು ಸ್ಥಾಪಿಸುವುದರ ಮೂಲ ಉದ್ದೇಶವೇನು;

ಆ) ಅರಣ್ಯಗಳ ಸಾಮಾನ್ಯ ನಿರ್ವಹಣೆ ಮತ್ತು ಅಭಿವೃದ್ಧಿ ಹಾಗೂ ವನ್ಯ ಮೃಗ ಸಂರಕ್ಷಣೆ ಇವುಗಳಿಗೆ ಪ್ರತ್ಯೇಕ ಅರಣ್ಯ ವಿಭಾಗ ಏರ್ಪಡಿಸದೇ ಒಂದೇ ವಿಭಾಗ ರಚಿಸಿರುವುದರಿಂದ ಆಯಾ ವಿಭಾಗಗಳಲ್ಲಿ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಯು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ತೊಂದರೆಯನ್ನು ನಿವಾರಿಸಲು ಕೈಗೊಳ್ಳಲಾಗಿರುವ ಕ್ರಮಗಳೇನು ?

ಶ್ರೀ ಎಂ.ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಸಚಿವರು):–

ಅ) 1. ರಕ್ಷಿತ ಅರಣ್ಯಗಳಲ್ಲಿ ವನ್ಯ ಜೀವಿಗಳ ಉಸ್ತುವಾರಿಗೆ ಪ್ರಾಶಸ್ತ್ಯ ಕೊಡಲು
2. ಅಭಯಾರಣ್ಯಗಳು ಮತ್ತು ರಾಷ್ಟ್ರೀಯ ಉದ್ಯಾನವನಗಳ ಮೇಲೆ ಪ್ರಾದೇಶಿಕ ಅರಣ್ಯ ವನ್ಯ ಜೀವಿ ಸಿಬ್ಬಂದಿ ಇಬ್ಬರ ದ್ವಿಮುಖ ನಿಯಂತ್ರಣವನ್ನು ತಪ್ಪಿಸುವುದಕ್ಕಾಗಿ
3. ಕೇಂದ್ರ ಸರ್ಕಾರದಿಂದ ಆರ್ಥಿಕ ಸಹಾಯವನ್ನು ಪಡೆಯುವುದಕ್ಕಾಗಿ.

ಆ) ಈ ಬಗ್ಗೆ ಮನವಿಗಳು ಬಂದಿರುತ್ತವೆ.

ಇ) ಈ ವಿಷಯವನ್ನು ಸಮೀಕ್ಷಿಸಲಾಗುತ್ತಿದೆ.

ಶ್ರೀ ಜಿ.ಎಸ್. ಆಚಾರ್:– ವನ್ಯಮೃಗ ಸಂರಕ್ಷಣಾ ವಿಭಾಗವನ್ನು ಸ್ಥಾಪಿಸುವ ಉದ್ದೇಶ ಗೊತ್ತಾಯಿತು. ಆದರೆ ಇದರಲ್ಲಿ ವ್ಯತ್ಯಾಸವಾಗಿದೆ. ನಾನು ಕೇಳಿದ್ದು ಏನೆಂದರೆ, ಅರಣ್ಯಗಳ ಸಾಮಾನ್ಯ ನಿರ್ವಹಣೆ, ಅಭಿವೃದ್ಧಿ ಹಾಗೂ ವನ್ಯಮೃಗಗಳ ಅಭಿವೃದ್ಧಿಗೆ ಬೇರೆ ಬೇರೆ ಡಿವಿಜನ್‌ಗಳನ್ನು ಮಾಡುತ್ತೀರಾ ಅಂತ. ಅದಕ್ಕೆ ಉತ್ತರ ಕೊಟ್ಟಿಲ್ಲ. ಈ ಬಗ್ಗೆ ಮನವಿಗಳು ಬಂದಿರುತ್ತವೆ, ಈ